ವರ್ಷದ ಹುಡುಗ, ಅವನಿಗೆ ನಾಲ್ಕು ವರ್ಷದ ತಂಗಿ. ಇಬ್ಬರೂ ನೋಡಲು ಮುದ್ದಾಗಿದ್ದರೂ ಸೀತಾಲಕ್ಷ್ಮಿಯ ಹೃದಯ ಅವರ ಹೊಳಪು ಕಂಗಳನ್ನು ನೋಡಿ ಕಂಪಿಸಿದ್ದರೂ ಒಮ್ಮೆಯೂ ಬಾಯಿಬಿಟ್ಟು ಹೆಂಡತಿ ಮಕ್ಕಳನ್ನು ಕರೆದುಕೊಂಡು ಬಾ ಎಂದಿರಲಿಲ್ಲ. ವಿಶ್ವನಾಥನೂ ಕರೆದುಕೊಂಡು ಬಂದಿರಲಿಲ್ಲ; ಅಮ್ಮನನ್ನು ಪಟ್ಟಣದಲ್ಲಿರುವ ತನ್ನ ಮನೆಗೂ ಒಮ್ಮೆಯೂ ಕರೆದೊಯ್ದಿರಲಿಲ್ಲ. ಊರಿನ, ಅಮ್ಮನ ನೆನಪಾದಾಗ ತಾನೊಬ್ಬನೇ ಬರುತ್ತಿದ್ದ, ತೋಟದಲ್ಲಿ ತಿರುಗಾಡಿ ದೇವಸ್ಥಾನದ ಎದುರೇ ಇದ್ದ ತೋಟಕ್ಕೆ ಮುಖಮಾಡಿದ್ದ ಗಣಪತಿಗೆ ದೂರದಿಂದಲೇ ಕೈ ಮುಗಿದು ಹೊರಟುಬಿಡುತ್ತಿದ್ದ. ಆಯಸ್ಸು ತೀರಿತ್ತು, ಗಂಡನೇನೋ ಹೋದ; ಆದರೆ ಮಗ, ಸೊಸೆ, ಮೊಮ್ಮಕ್ಕಳು ಹತ್ತಿರದಲ್ಲಿದ್ದೂ ತಾನೇಕೆ ಇಷ್ಟು ವರ್ಷಗಳಿಂದ ಇಷ್ಟು ದೊಡ್ಡ ಮನೆಯಲ್ಲಿ ಒಂಟಿಯಾಗಿ ಕಾಲಕಳೆಯುತ್ತಾ ಮಾತಿಗಾಗಿ ಹಂಬಲಿಸುತ್ತಾ ನವೆಯುತ್ತಿದ್ದೇನೆ? ವಿಧಿಯ ಆಟವೆಂದರೆ ಇದೇ ಇರಬೇಕು ಎಂದುಕೊಂಡಿದ್ದಳು ಸೀತಾಲಕ್ಷ್ಮಿ.

ಚಿದಂಬರ ಭಟ್ಟರನ್ನು ಮದುವೆಯಾಗಿ ಬಂದಾಗ ಸೀತಾಲಕ್ಷ್ಮಿ ತುಂಬಾ ಚಿಕ್ಕ ಹುಡುಗಿಯೇನಾಗಿರಲಿಲ್ಲ. ಮಾತಿನ ಮಲ್ಲಿಯಾಗಿ ಸ್ವಲ್ಪ ಜಾಸ್ತಿ ಉದ್ದ ಇದ್ದವಳ ಜಾತಕ ಯಾರಿಗೂ ಸರಿ ಹೊಂದದೇ ಸುಮಾರು ವರ್ಷಗಳ ಕಾಲ ಮದುವೆಯಾಗದೇ ಹುಡುಕೀ ಹುಡುಕೀ ಸುಸ್ತಾಗಿದ್ದ ಅಣ್ಣಂದಿರು ಸೀತಾಲಕ್ಷ್ಮಿಯನ್ನು ಎರಡನೇ ಮದುವೆಗೆ ಒಪ್ಪಿಸಿ ಸಾಗ ಹಾಕಿದ್ದರು. ಊರಿನಲ್ಲಿ ತುಸು ಹೆಚ್ಚೇ ತೋಟ ಗದ್ದೆ ಬ್ಯಾಣಗಳನ್ನು ಹೊಂದಿ ಸ್ಥಿತಿವಂತರಾಗಿದ್ದ ಚಿದಂಬರ ಭಟ್ಟರಿಗೆ ಮೊದಲನೇ ಹೆಂಡತಿ ತೀರಿಕೊಂಡು ಒಂದು ವರ್ಷವಾಗುವ ಹೊತ್ತಿಗೇ ಮತ್ತೊಂದು ಮದುವೆಯಾಗಬೇಕೆಂದು ಯಾಕೆ ಅನಿಸಿತೋ? ಬೆಳೆದ ಮೂವರು ಮಕ್ಕಳು ಸೊಸೆಯಂದಿರ ವಿರೋಧವನ್ನು ಎದುರಿಸಿಯೂ ಹೇಗೋ ಹುಡುಕಿ ಸೀತಾಲಕ್ಷ್ಮಿಯನ್ನು ಮದುವೆಯಾಗಿ ಮನೆತುಂಬಿಸಿಕೊಂಡೇಬಿಟ್ಟಿದ್ದರು! ಬೆಳೆದ ಮಕ್ಕಳು ಅಪ್ಪನ ಈ ಹುಚ್ಚನ್ನು ಅರಗಿಸಿಕೊಳ್ಳಲಾಗದೇ ಹಿಂಸೆಯಾಗಿ ತಮ್ಮ ತಮ್ಮ ಪಾಲು ಪಡೆದು ಬೇರೆ ಬೇರೆಯಾಗಿ ಮನೆ ಮಾಡಿಕೊಂಡಿದ್ದರು.

